ದಿನಾಂಕ 22-05-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 2ನೇ ಎದುರುದಾರರ ಪರ ಶ್ರೀ ಕೆ ಎನ್ ಎಸ್ ವಕೀಲರಿಂದಃ-

ನಾನು ವಿದ್ಯಾಭಾಸ ಮಾಡಿಲ್ಲ. ನಾನು ಅಪಘಾತದ ದಿನ ನಾನು ರಾಮನಗರದಿಂದ ನಮ್ಮ ಊರಿಗೆ ಹೋಗುತ್ತಿದ್ದೇ. ನನ್ನ ಸ್ವಂತ ಊರು ಗೊರವನಹಳ್ಳಿ ಗ್ರಾಮ. ಆಟೋದಲ್ಲಿ 3 ಜನ ಇದ್ದರು. ಎಲ್ಲರು ಗೌಡಯ್ಯನದೊಡ್ಡಿಗೆ ಹೋಗುತ್ತಿದ್ದೇವು. ನಾನು ಆಟೋದಲ್ಲಿ ಮುಂಭಾಗದಲ್ಲಿ ಚಾಲಕ ಪಕ್ಕದಲ್ಲಿ ಕುಳಿತಿದ್ದೇ. ಚಾಲಕರ ಸೀಟಿನಲ್ಲಿ ಯಾರು ಕುಳಿತುಕೊಳ್ಳುವಂತಿಲ್ಲ ಎಂದರೆ ಸಾಕ್ಷಿ ಚಾಲಕರ ಪಕ್ಕದಲ್ಲಿ ಹಿಂಭಾಗದಲ್ಲಿ ಸೀಟಿ ನಲ್ಲಿ ಕುಳಿತಿದ್ದೇ ಎಂದು ನುಡಿಯುತ್ತಾರೆ. ಅಪಘಾತವಾದ ತಕ್ಷಣ ನಾನು ನಾರಾಯಣ ಆಸ್ಪತ್ರೆಗೆ ಆಟೋದವರು ಕರೆದುಕೊಂಡು ಹೋದರು. ಆಟೋದಲ್ಲಿ ಕುಳಿತಿದ್ದ ಇನ್ನೂ ಇಬ್ಬರಿಗೂ ಸಣ್ಣ ಪುಟ್ಟ ಗಾಯಗಳು ಅಗಿದ್ದವು. ಡಿಕ್ಕಿ ಹೊಡೆದಾಗ ಆಟೋಯಾವ ಕಡೆಗೆ ಬಿತ್ತು ಎಂದರೆ ಸಾಕ್ಷಿ ನನಗೆ ಬಿದ್ದ ತಕ್ಷಣ ಪ್ರಜ್ಞೆ ಇರಲಿಲ್ಲ ಎಂದು ನುಡಿಯುತ್ತಾರೆ. ಅಟೋದಲ್ಲಿ ಉಳಿದ ಇಬ್ಬರನ್ನು ವಿಚಾರಣೆ ಮಾಡಿಸಬಹುದು ಎಂದರೆ ಅವರು ತೀರಿಕೊಂಡಿದ್ದಾರೆಂದು ನುಡಿಯುತ್ತಾರೆ. ಅಟೋ ಚಾಲಕನೂ ಸಹ ತೀರಿಕೊಂಡರು. ನಾನು ಅ ದಿನ ಅಟೋದಲ್ಲಿ ಹೋಗುತ್ತಿರಲಿಲ್ಲ, ಅರ್ಜಿಯಲ್ಲಿ ಹೇಳಿರುವ ಆಟೋ ಅಪಘಾತ ಪಡಿಸಿಲ್ಲ ಎಂದರೆ ಸರಿಯಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

ನನಗೆ ಚಿಕಿತ್ಸೆ ನೀಡಿದ್ದ ವೈದ್ಯರನ್ನು ವಿಚಾರಣೆ ಮಾಡಿಸಬಲ್ಲೇ. ಗಾಯಗಳು ಹೇಗೆ ಅದವು ಎಂದು ವೈದ್ಯರಿಗೆ ಹೇಳಿದ್ದೇನೆ. ಆಸ್ಪತ್ರೆ ದಾಖಲೆಯನ್ನು ಹಾಜರುಪಡಿಸಿದ್ದೇನೆ. ಅಸ್ಪತ್ರೆಯಿಂದ ಬಿಡುಗಡೆಯಾದ ನಂತರ 6 ತಿಂಗಳ ನಂತರದ ಚಿಕಿತ್ಸೆ ಪಡೆದುಕೊಂಡಿದ್ದೇನೆಂದು ಸುಳ್ಳು ಎಂದರೆ ಸರಿಯಲ್ಲ. ಚಿಕಿತ್ಸೆಗಾಗಿ 2 ಲಕ್ಷದ 10 ಸಾವಿರ ಖರ್ಚು ಅಗಿದೆ ಎಂದು ಸುಳ್ಳು

ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಂತರದ ಶಸ್ತ್ರ ಚಿಕಿತ್ಸೆಗಾಗಿ 50 ಸಾವಿರ ಖರ್ಚು ಅಗುತ್ತದೆಂದು ದಾಖಲೆಯನ್ನು ಹಾಜುರುಪಡಿಸಿದ್ದೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವ ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ದಿನಕ್ಕೆ 1 ಸಾವಿರ ಸಂಪಾದನೆ ಮಾಡುತ್ತಿದೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿದ್ದೇನೆ. ಪರಿಹಾರ ಪಡೆಯುವ ಉದ್ದೇಶದಿಂದ ದಾಖಲೆಯನ್ನು ಸೃಷ್ಟಿಸಿ ತಂದು ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ. ಅಪಘಾತದ ಕಾಲಕ್ಕೆ ನನ್ನ ವಯಸ್ಸು 42 ವರ್ಷ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯ ಮಂಡಳಿಯ
ಪೀಠಾಧಿಕಾರಿಗಳು.